ಆ) ಈ ಕಟ್ಟಡದ ಕೊರತೆಯಿಂದ ವಿದ್ಯಾರ್ಥಿಗಳಿಗೆ ವಿಜ್ಞಾನ ಪದವಿ ತರಗತಿಗಳಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಡಾ. ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು) :

ಅ) ಶಿಡ್ಲಘಟ್ಟ ತಾಲ್ಲೂಕು ಕೇಂದ್ರದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾಗಿ 20 ವರ್ಷಗಳಾಯಿತು. ಈ ವರ್ಷದ ಜೂನ್ ವೇಳೆಗೆ ಅಪೂರ್ಣಗೊಂಡಿರುವ ಕಟ್ಟಡ ಮುಕ್ತಾಯವಾಗುವ ಸಂಭವವಿದ್ದು, ಈಗಾಗಲೇ ಈ ಸಂಬಂಧದ ವೆಚ್ಚ ರೂ.11.23 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಟ್ಟಡದ ಪ್ರಗತಿಯನ್ನಾಧರಿಸಿ ಉಳಿದ ಅನುದಾನ ರೂ.58.72 ಲಕ್ಷಗಳನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆ) ಹೌದು.

ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನ

499 (761) ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ರಾಜ್ಯಕ್ಕೆ 2009–10 ಮತ್ತು 2010–11 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು (ಕ್ಷೇತ್ರವಾರು ಜಿಲ್ಲಾವಾರು ವಿವರ ನೀಡುವುದು);

ಆ) ಈ ಯೋಜನೆಯಡಿಯಲ್ಲಿ ಸ್ಥಳೀಯ ಜನಸಂಖ್ಯೆಗೆ ಅನುಗುಣವಾಗಿ ಕೂಲಿಕಾರರಿಗೆ ಉದ್ಯೋಗ ಗುರುತಿನ ಚೀಟಿ (ಜಾಬ್ ಕಾರ್ಡು) ನೀಡಲಾಗುವುದೇ;

ಇ) ಹಾಗಿಲ್ಲದಿದ್ದಲ್ಲಿ, ಪ್ರತಿಯೊಂದು ಗ್ರಾಮದಲ್ಲಿ ಉದ್ಯೋಗ ನಿರ್ಮಾಣ ಮಾಡಲು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ನಿರ್ದಿಷ್ಟವಾದ ಯಾವ ಕ್ರಮಗಳನ್ನು ತೆಗೆದುಕೊಂಡಿದೆ;

ಈ) ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಸರಬರಾಜು (ಸಬ್–ಮಿಷನ್) ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ

ಸುರಕ್ಷಿತ ಕುಡಿಯುವ ನೀರಿನ ಪೂರೈಕೆ ರಾಜ್ಯಕ್ಕೆ 2009–10 ಮತ್ತು 2010–11ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಎಷ್ಟು;

ಊ) ಈ ಬಗ್ಗೆ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ರೂಪಿಸಿರುವ ಕುಡಿಯುವ ನೀರಿನ ಯೋಜನೆಗಳೆಷ್ಟು (ಕ್ಷೇತ್ರವಾರು ವಿವರ ನೀಡುವುದು);

ಋ) ಈ ಯೋಜನೆಗಳ ಅನುಷ್ಠಾನಕ್ಕೆ ನೀರಾವರಿ ಮೂಲಗಳನ್ನು ಗುರುತಿಸಲಾಗಿದೆಯೇ; ಹಾಗಿದ್ದಲ್ಲಿ, ಈ ಎರಡು ಜಿಲ್ಲೆಗಳಲ್ಲಿ ಕೈಗೊಂಡ ಯೋಜನೆಗಳೆಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು) :

ಅ) ಸದರಿ ಯೋಜನೆಯಡಿ 2009–10 ಮತ್ತು 2010–11ನೇ ಸಾಲಿನಲ್ಲಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಕ್ರಮವಾಗಿ ರೂ.2401.48 ಕೋಟಿಗಳು ಮತ್ತು ರೂ.1141.10 ಕೋಟಿಗಳು ಸ್ವೀಕರಿಸಿದ ಕೇಂದ್ರ ಸರ್ಕಾರದ ಅನುದಾನವನ್ನು ರಾಜ್ಯ ಸರ್ಕಾರದ ಅನುದಾನದೊಂದಿಗೆ ರಾಜ್ಯ ಮಟ್ಟದಲ್ಲಿ ಸ್ಥಾಪಿಸಲಾದ ರಾಜ್ಯ ಉದ್ಯೋಗ ಖಾತರಿ ನಿಧಿಗೆ ಜಮೆ ಮಾಡಿಕೊಂಡು ಈ ನಿಧಿಯ ಮೂಲಕ ಜಿಲ್ಲಾ ಪಂಚಾಯಿತಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಜಿಲ್ಲಾವಾರು ಅನುದಾನದ ಮಾಹಿತಿ ಲಭ್ಯವಿದ್ದು ಕ್ಷೇತ್ರವಾರು ಅನುದಾನದ ಮಾಹಿತಿಯು ಲಭ್ಯವಿರುವುದಿಲ್ಲ ಆದ್ದರಿಂದ ಸದರಿ ಸಾಲುಗಳಲ್ಲಿ ಜಿಲ್ಲಾವಾರು ಬಿಡುಗಡೆ ಮಾಡಿದ ಅನುದಾನದ ಮಾಹಿತಿಯನ್ನು ಅನುಬಂಧ 'ಅ' ನಲ್ಲಿ ಒದಗಿಸಿದೆ.

ಆ) ಇಲ್ಲಾ

ಇ) ಯೋಜನೆಯ ಮಾರ್ಗಸೂಚಿಯಂತೆ ಸ್ವಇಚ್ಛೆಯಿಂದ ನೊಂದಾಯಿಸಿಕೊಳ್ಳುವ ಕುಟುಂಬಗಳಿಗೆ ಉದ್ಯೋಗ ಚೀಟಿಗಳನ್ನು ನೀಡಲಾಗಿದೆ ಹಾಗೂ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಿದ ನೊಂದಾಯಿತ ಕುಟುಂಬಗಳಿಗೆ ಆಯಾ ಗ್ರಾಮ ಪಂಚಾಯಿತಿಗಳು ಉದ್ಯೋಗವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರು ಸರಬರಾಜು (ಸಬ್ ಮಿಷನ್) ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

ವರ್ಷ	ಕೇಂದ್ರ ವಲಯ		ರಾಜ್ಯ ವಲಯ	
	ನಿಗದಿಪಡಿಸಿದ ಅನುದಾನ	ಬಿಡುಗಡೆ (ಪ್ರಾರಂಭಿಕ ಶಿಲ್ಕು ಸೇರಿ)	ನಿಗದಿಪಡಿಸಿದ ಅನುದಾನ	ಬಿಡುಗಡೆ
2009–10	9120.00	20604.05	9120.00	8327.35
2010–11	32413.01	34330.66	25900.00	26822.70

2010–11 ನೇ ಸಾಲಿಗೆ ಸಂಬಂಧಿಸಿದಂತೆ ಇದರಲ್ಲಿ ಸಬ್‌ಮಿಷನ್ ಯೋಜನೆಯಲ್ಲದೆ ಬೇರೆ ಯೋಜನೆಯ ಮೊತ್ತವು ಕೂಡ ಸೇರಿರುತ್ತದೆ.

ಉ) ವಿವರಗಳನ್ನು ಅನುಬಂಧ 'ಆ' ನಲ್ಲಿ ಲಗತ್ತಿಸಿದೆ.

ಊ) ನೀರಾವರಿ ಮೂಲಗಳನ್ನು ಗುರುತಿಸಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು ಆರು ಯೋಜನೆಗಳನ್ನು ಕೈಗೊಳ್ಳಲಾಗಿದೆ. ಕೋಲಾರ ಜಿಲ್ಲೆಯಲ್ಲಿ ಒಂದು ಯೋಜನೆಯನ್ನು ಕೈಗೊಳ್ಳಲಾಗಿದೆ.

ವಿಧಾನ ಸಭೆಯ ಸದಸ್ಯರಾದ ಮಾನ್ಯಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ) ಇವರ ಚುಕ್ಕೆಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ 761ರ ಕ್ಕೆ

ಅನುಬಂಧ 'ಅ'

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2009–10 ಮತ್ತು 2010–11ನೇ ಸಾಲಿನಲ್ಲಿ ಜಿಲ್ಲಾವಾರು ಬಿಡುಗಡೆಯಾದ ಅನುದಾನದ ವಿವರದ ತಃಖ್ತೆ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆ	2009–10	2010–11
1	ಬಾಗಲಕೋಟೆ	11822.30	5280.00
2	ಬೆಂಗಳೂರು (ನ)	3325.00	1382.00
3	ಬೆಂಗಳೂರು (ಗ್ರಾ)	4904.50	3172.00
4	ಬೆಳಗಾಂ	25866.00	18227.00
5	ಬಳ್ಳಾರಿ	8713.20	6447.00
6	ಬೀದರ್	7347.33	5581.00
7	ಬಿಜಾಪುರ	10054.70	4407.00
8	ಚಾಮರಾಜನಗರ	3143.00	2517.00
9	ಚಿಕ್ಕಬಳ್ಳಾಪುರ	8650.50	4011.00
10	ಚಿಕ್ಕಮಗಳೂರು	3481.50	4555.00
11	ಚಿತ್ರದುರ್ಗ	8690.00	8743.00
12	ದಾವಣಗೆರೆ	9385.00	10437.00
13	ಧಾರವಾಡ	6203.50	4077.00
14	ದಕ್ಷಿಣ ಕನ್ನಡ	2014.00	2860.00
15	ಗದಗ	3743.90	2398.00
16	ಗುಲ್ಬರ್ಗಾ	23675.50	8691.00
17	ಹಾಸನ	4591.00	4892.00
18	ಹಾವೇರಿ	9381.00	6471.00

19	ಕೊಡಗು	1367.00	2299.00
20	ಕೋಲಾರ	13448.66	4393.00
21	ಕೊಪ್ಪಳ	8947.20	5574.00
22	ಮಂಡ್ಯ	3919.00	3296.00
23	ಮೈಸೂರು	5993.00	4454.00
24	ರಾಯಚೂರು	11549.00	6292.00
25	ರಾಮನಗರ	4114.00	3814.00
26	ಶಿವಮೊಗ್ಗ	8638.75	7544.00
27	ತುಮಕೂರು	18836.00	9020.20
28	ಉಡುಪಿ	777.00	1627.00
29	ಉತ್ತರ ಕನ್ನಡ	3846.00	4355.00
30	ಯಾದಗಿರಿ		4067.00
	ಒಟ್ಟು	**236427.54**	**160883.20**

ವಿಧಾನಸಭೆಯ ಸದಸ್ಯರಾದ ಮಾನ್ಯಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ) ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 761ರ ಕ್ಕೆ

ಅನುಬಂಧ 'ಆ'

ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ರೂಪಿಸಿರುವ ಕುಡಿಯುವ ನೀರಿನ ಯೋಜನೆಗಳ ಕ್ಷೇತ್ರವಾರು ವಿವರದ ತಃಖ್ತೆ

ಚಿಕ್ಕಬಳ್ಳಾಪುರ ಜಿಲ್ಲೆ :

ಕ್ರ ಸಂ.	ತಾಲ್ಲೂಕು	ಕಾಮಗಾರಿ ಹೆಸರು	ಷರಾ
1	ಬಾಗೇಪಲ್ಲಿ	ವಂಡಮಾನ್ ಕೆರೆಯಿಂದ 62 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು	ಕಾಮಗಾರಿ ಪ್ರಗತಿಯಲ್ಲಿದೆ.
2	ಬಾಗೇಪಲ್ಲಿ	ಪರಗೋಡು ಜಲಾಶಯದಿಂದ 75	ಕರ್ನಾಟಕ ನಗರ ನೀರು ಸರಬರಾಜು &

		ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು	ಒಳಚರಂಡಿ ಮಂಡಳಿ ವತಿಯಿಂದ ಕಾಮಗಾರಿ ಪ್ರಾರಂಭವಾಗಿದ್ದು, ಪ್ರಗತಿಯಲ್ಲಿದೆ.
3	ಬಾಗೇಪಲ್ಲಿ	ತಾಲ್ಲೂಕಿನ 44 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು	ಸದರಿ ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಸಮಾಲೋಚಕರಿಂದ ಸಮೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ.
4	ಬಾಗೇಪಲ್ಲಿ	26 ಗ್ರಾಮಗಳಲ್ಲಿ ಸಚೇತನ (BAIF) ಯೋಜನೆಯಡಿ ಮಳೆ ನೀರು ಕೊಯ್ಲು	ಕಾಮಗಾರಿ ಪ್ರಗತಿಯಲ್ಲಿದೆ. ಈವರೆಗೂ ರೂ.150.00 ಲಕ್ಷಗಳು ಬಿಡುಗಡೆಯಾಗಿದ್ದು, ರೂ.109.78 ಲಕ್ಷಗಳಷ್ಟು ವೆಚ್ಚವಾಗಿದೆ.
5	ಗುಡಿಬಂಡೆ	ಪರಗೋಡು ಜಲಾಶಯದಿಂದ 53 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ (ಕ.ನ.ನೀ.ಸ ಮತ್ತು ಒ.ಮಂ. ವತಿಯಿಂದ ನಿರ್ವಹಣೆ)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಡಿ ಮಂಡಳಿ ವತಿಯಿಂದ ಕಾಮಗಾರಿ ಪ್ರಾರಂಭವಾಗಿದೆ.
6	ಚಿಕ್ಕಬಳ್ಳಾಪುರ	ಜಕ್ಕಲಮಡಗು ಜಲಾಶಯದಿಂದ ಚಿಕ್ಕಬಳ್ಳಾಪುರ ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯ ಮಾರ್ಗ	10 ಗ್ರಾಮಗಳಿಗೆ ಕ.ನ.ನೀ.ಸ & ಒ. ಮಂಡಳಿಯರಿಂದ ಶುದ್ಧ ಕುಡಿಯುವ ನೀರು ಒದಗಿಸಲು

		ಮಧ್ಯದ 10 ಗ್ರಾಮ ಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ	ಕ್ರಮ ಕೈಗೊಳ್ಳಲಾಗಿದೆ.

ಕೋಲಾರ ಜಿಲ್ಲೆ :

1	ಮಾಲೂರು	ಮಾರ್ಕಂಡೇಯ ಜಲಾಶಯ ದಿಂದ ಮಾಲೂರು ತಾಲ್ಲೂಕಿನ 184 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ	ಕಾಮಗಾರಿ ಪ್ರಗತಿಯಲ್ಲಿದೆ.

ಬಯಲು ಸೀಮೆ ಪ್ರದೇಶದಲ್ಲಿ ಕುಡಿಯುವ ನೀರು ಸಮಸ್ಯೆ

500 (762) ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ) : ಮಾನ್ಯ ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ. ಪರಮಶಿವಯ್ಯರವರ ವರದಿ ಆಧರಿಸಿ, ಬಯಲು ಸೀಮೆಯ ಪ್ರದೇಶಕ್ಕೆ ಶಾಶ್ವತ ಕುಡಿಯುವ ನೀರನ್ನು ಒದಗಿಸಲು ನಡೆಸಿರುವ ಸಮೀಕ್ಷೆಯ ಇತ್ತೀಚಿನ ಪೂರ್ಣ ವರದಿಯ ಪ್ರತಿಯನ್ನು ನೀಡುವುದು;

ಆ) ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳ ಸರ್ವ ಪಕ್ಷಗಳು, ರೈತರು ಹಾಗೂ ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆಯನಿವಾರಣೆ ಬಗ್ಗೆ ಇತ್ತೀಚೆಗೆ ಬಂದ್ ಮಾಡಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಬಯಲು ಸೀಮೆ ಪ್ರದೇಶದ ಜನರಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಡಾ॥ ಪರಮಶಿವಯ್ಯರವರು ಜಲಸಂಪನ್ಮೂಲ ಇಲಾಖೆಗೆ ವರದಿ ಸಲ್ಲಿಸಿದ್ದು ಪ್ರಶ್ನಿತ ಯೋಜನೆಯ ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವ ಕುರಿತು, ಯೋಜನಾ ವರದಿ ತಯಾರಿಸಲು ದಿ: 4.3.2011